'ನೀವು ಸಂಸ್ಕೃತಿಯ ಹೆಸರಿನಲ್ಲಿ ಎಷ್ಟೇ ಕೂಗಾಟ ನಡೆಸಿದರೂ ವಿವಾಹಪೂರ್ವ ಸಂಭೋಗವನ್ನು ಹೊಸ ಪೀಳಿಗೆ ಕೆಟ್ಟ ವಿಚಾರವೆಂದು ಒಪ್ಪುವುದೇ ಇಲ್ಲ.' ಯಾರೋ ಎತ್ತರದ ಧ್ವನಿಯಲ್ಲಿ ಹೇಳಿದರು. ಹೊಸ ಪೀಳಿಗೆಯ ಪ್ರತಿನಿಧಿ ಇರಬೇಕು.

'ಶೀ! ಇಂತಹ ಕೆಟ್ಟ ದಾರಿಯಲ್ಲಿ ಹೊಸ ಪೀಳಿಗೆ ಹೋಗಬಾರದು...' ಯಾರೋ ಅಷ್ಟೇ ತೀವ್ರತೆಯಿಂದ ಹೇಳಿದರು.

ಆಮೇಲೆ ಅವರಿಬ್ಬರ ಪಕ್ಷ ವಹಿಸಿ ಎಷ್ಟೋ ಧ್ವನಿಗಳು ಕೇಳಿ ಬಂದವು.

ಇದನ್ನೆಲ್ಲಾ ಕೇಳುತ್ತಾ ಕುಂದಾ ಅಲ್ಲಿ ಮೌನವಾಗಿ ಕುಳಿತಿದ್ದಳು. ಅವಳಿಗೂ ಅದರಲ್ಲಿ ಪಾಲುಗೊಳ್ಳುವುದು ಬೇಕಿತ್ತು.

ಸಮಾಜ ಸುಧಾರಿಸಿದೆ... ಸಮಾಜ ಬದಲಾಗಿದೆ ಹೀಗೆ ಹೇಳುವಾಗ ಒಂಟಿತನದಲ್ಲಿ ತಾಯ್ತನ ಬಂದಿರುವ ಹೆಣ್ಣಿನ ಕುರಿತು ಸಮಾಜ ಏನು ಮಾತನಾಡುತ್ತದೆ ಈ ಕುರಿತು ಅವಳಿಗೆ ತಿಳಿದುಕೊಳ್ಳುವುದು ಬೇಕಿತ್ತು. ಅದನ್ನು ಕೇಳುವ ಪ್ರಯತ್ನವನ್ನು ಅವಳು ನಡೆಸಿದಳು. ಆದರೆ ಆ ಗಲಟೆಯಲ್ಲಿ ಅವಳ ಧ್ವನಿ ಯಾರಿಗೂ ಕೇಳಿಸಲಿಲ್ಲ. ಆಮೇಲೆ 'ಅವಳೇ ಅನುಭವಿಸಲಿ' ಎಂದು ಹೇಳಿ ಮೌನವಾಗಿ ಕುಳಿತಳು. ಅವಳು ಕಿವಿಗಳನ್ನು ಮುಚ್ಚಿಕೊಂಡಳು. ಆದರೆ ಕಿವಿ ಮುಚ್ಚಿಕೊಳ್ಳುವುದರಿಂದ ಏನೂ ಆಗುವುದಿಲ್ಲ, ಒಳಗಿನ ಧ್ವನಿ ಕಿವಿಯ ಮೇಲೆ ಬೀಳತೊಡಗುತ್ತದೆ.

ಘೋಷಣೆ ಕೂಗಿಕೊಳ್ಳುತ್ತಾರೆ.

ಸಮಾಜ ಪುರೋಗಾಮಿ ಮುಖವಾಡ ಧರಿಸಿ ಥೈಥೈ ಕುಣಿಯಲಾರಂಭಿಸುತ್ತದೆ. ಮುಖವಾಡದ ಹಿಂದೆ ಯಾರು ಹೇಗೆ ಎನ್ನುವುದು ದೇವರೇ ಬಲ್ಲ! ಕೈಯಲ್ಲಿ ನಿಷ್ಠೆಯ ಕೋಲು ಹಿಡಿದು ಎದ್ದು ನಿಲ್ಲುವ ಸಮಾಜ.

ಕುಂದಾ ಬೆವರುತ್ತಾಳೆ.

'ಹಾಗೆ ಹೀಗೆ' ಏನಾದರೂ ಸಂಭವಿಸಿದರೆ ಜನ ಏನು ಹೇಳಬಹುದು ಎಂಬ ಚಿಂತೆ. ಜನರೆಂದರೆ? ಜನರು ಎಂದರೆ ಸಮಾಜ.

ಇನ್ನು ಈ ಸಮಾಜವೆಂಬುದು ನಿನ್ನ ಮನೆಯ ಹೊರಗೆ ನಿಂತಿಲ್ಲ. ಅದರ ಬೇರುಗಳ ಮೂಲ ಮನೆಯಿಂದಲೇ ಪ್ರಾರಂಭವಾಗುತ್ತದೆ. ಮನೆಯಲ್ಲಿದ್ದು ನಿನಗೆ ಯಾರ್‍ಯಾರು ಪ್ರಶ್ನೆ ಕೇಳುತ್ತಾರೋ ಅವರೇ ಸಮಾಜ. ಅವರಷ್ಟೇ ಅಲ್ಲ 'ನೀನು ತಪ್ಪಿರುವೆ... ನೀನು ತಪ್ಪಿರುವೆ' ಹೀಗೆ ಹೇಳಿ ಒಂದೇ ಸವನೆ ತನ್ನನ್ನು ದೂಷಿಸುತ್ತಾ ಇರುವ ತನ್ನ ಮನಸ್ಸು, ಅದು ಕೂಡ ಸಮಾಜದ ಒಂದು ಭಾಗವೇ. ಸಮಾಜ ರೂಪಿಸಿದ ಮನೋವೃತ್ತಿ. ಮೈಂಡ್ ಸೆಟ್! ಬೇರೆಯವರದನ್ನು ಬಿಟ್ಟು ಕೊಡಬಹುದು ಆದರೆ ಈ ಮನಸ್ಸು ಇದೆಯಲ್ಲ, ಇದಕ್ಕೆ ಏನು ಮಾಡಬಹುದು?

ಕಚೇರಿಯ ದೇಸಾಯಿಗೆ ಅವಳು ಇಷ್ಟವಾಗಿದ್ದಾಳೆ. ನೋಡಲು ಚೆನ್ನಾಗಿದ್ದಾಳೆ, ನಡತೆ ಚೆನ್ನಾಗಿದೆ ಆದರೂ ಇದುವರೆಗೆ ಕುಂದಾಳ ಮದುವೆ ಯಾಕೆ ಆಗಿಲ್ಲ ಎಂದು ಅವನಿಗೆ ಆಶ್ಚರ್ಯ. ದೇಸಾಯಿಯದೂ ವಿವಾಹ ಆಗಿಲ್ಲ. ಒಂದು ದಿನ ಅವನು ಧೈರ್ಯ ಮಾಡಿ ಕುಂದಾಳಲ್ಲಿ ಪ್ರಸ್ತಾಪವಿಟ್ಟನು. ಆದರೆ ಕುಂದಾ ಅವನಿಗೆ ನಿರಾಕರಿಸಿದಳು. ದೇಸಾಯಿ ಒಳ್ಳೆ ಮನುಷ್ಯ ಎನ್ನುವುದು ಅವಳಿಗೆ ಗೊತ್ತಿದೆ. ಆದರೂ ಅವಳು ಇಲ್ಲವೆಂದು ಹೇಳಿದ್ದಳು. ಕಾರಣ ನೇರವಾಗಿ ಸಾಗುತ್ತಿದ್ದ ಕುಂದಾಳ ಬದುಕಿನಲ್ಲಿ ವಕ್ರ ತಿರುವು ಪ್ರಾರಂಭವಾಗಿತ್ತು.

ಇಂತಹ ತಿರುವುಗಳು ಆಕಸ್ಮಿಕವಾಗಿ ಬರುತ್ತವೆ. ಗೊತ್ತೇ ಆಗುವುದಿಲ್ಲ. ಹಿಂತಿರುಗಿ